

**ಅಪೂರ್ವ ಸಹೋದರರು:** ಪಂಚೆ ಪರಂಪರೆಯ ವರದರಾಜ್ ಹಾಗೂ ರಾಜ್‌ಕುಮಾರ್



ಆಗಿತ್ತು. ಸೊಂಟಕ್ಕೆ ಬಿಗಿಯಾಗಿ ಕಟ್ಟಿದರೆ ಪಂಚೆ, ಕಚ್ಚೆ ಹಾಕಿದರೆ ಕಾಸೆ. ಇಂತಿಪ್ಪ ಪಂಚೆಗೆ ಭಾರತವೇ ಉಗಮ ಸ್ಥಾನ.

ಕ್ರಿಸ್ತಪೂರ್ವದಲ್ಲಿ ಪಂಚೆ ಉಟ್ಟ ಬಗ್ಗೆ ಶಿಲಾ ಶಾಸನಗಳಲ್ಲಿ ಕೆತ್ತಲಾಗಿದೆ. ಹಿಂದೆಲ್ಲಾ ಪಂಚೆ ಕಳಚಿ ಬೀಳಬಾರದೆಂದು ಸೊಂಟಕ್ಕೆ ಬೆಲ್ಟ್ ಬಿಗಿಯುತ್ತಿದ್ದರು. ಈಗ ಸೊಂಟದ ಸುತ್ತಲೂ ವೆಲ್ಕ್ರೋ ಅಳವಡಿಸಿದ ಪಂಚೆ ಲಭ್ಯವಿದ್ದು ಉಡುವ ಬದಲು ಧರಿಸಿದರಾಯಿತು. ಮದುವೆ ಮಂಟಪದಿ ಗೃಹಸ್ಥಾಶ್ರಮಕ್ಕೆ ಕಾಲಿರಿಸುವ ಕೌಂಟ್ ಡೌನ್ ಸಮಯ ಬಸಿಯುವ ಬೆವರಿನ ಇಶ್ಯೂಗಾಗಿ ಮದುಮಗ ಟಿಶ್ಯೂ ಇರಿಸಿಕೊಳ್ಳಲು ಹಾಗೂ ಆರತಿ ತಟ್ಟೆಗೆ ಕಾಸು ಹಾಕಲು... ಕಾಸೆಗೆ ಜೇಬುಗಳು ಅಟ್ಯಾಚ್ ಆಗಿರುತ್ತವೆ. ಪಂಚೆಯ ಮೇಲೊಂದು ಕುರ್ತಾ, ಜುಬ್ಬಾ ಅಥವಾ ಅಂಗಿ ಧರಿಸಿ ಅದರ ಮೇಲೆ ಶಲ್ಯಾ ಹೊದ್ದು ಹೊರಟರೆ ಪ್ಯಾಂಟ್ ಕೂಡ ನಾಚುವುದು.

ನಲ್ಲಿ ಜಗಳ ಬೀದಿ ಜಗಳಗಳು ರಂಗೇರುವ ಸಮಯ ಹೆಂಗಳೆಯರು ಸೀರೆಯ ನೆರಿಗೆಯನ್ನು ತುಸು ಮೇಲೆತ್ತಿ ಸೊಂಟಕ್ಕೆ ಸಿಕ್ಕಿಸಿದರೆ ಪುರುಷರು ಪಂಚೆಯನ್ನು ಮೇಲೆತ್ತಿ ಚಡ್ಡಿ ಲೆವೆಲ್‌ಗೆ ಕಟ್ಟಿ ಫಾರ್ಮ್‌ಗೆ ಬರುವರು. ಲಹರಿ ಬಂದಾಗ ಇದೇ ಪೋಸ್‌ನಲ್ಲಿ ನರ್ತನವೂ ಸಂಪನ್ನಗೊಳ್ಳುವುದು.

'ಯಂಟಮ್ಮ ಯಂಟಮ್ಮ ಸುರ್ ಜ್ಞೇಡ್ ದೊ ಮಮಾ ಈ ರೋಜು ವೇಡುಕಗ ಉಂಟುಂಡಿ ಉಂಟುಂಡಿ ನಾಚೇಂಗೆ ಅಖ್ಯೇ ಉತಾ ಕರ್ ಕೆ ಲುಂಗಿ' ಎನ್ನುತ್ತಾ ರಾಮಚರಣ್, ಸಲ್ಮಾನ್ ಖಾನ್ ಪಂಚೆಯಲ್ಲೇ ಬೈಕ್ ಓಡಿಸಿ, ನರ್ತಿಸಿ ಮಿಲಿಯನ್‌ಗಟ್ಟಲೆ ವ್ಯೂಯ್ಸ್ ಗಿಟ್ಟಿಸಿರುವರು. ಅಂತೆಯೇ ಧೋತಿ ಧರಿಸಿದ ಧೋನಿ ಪ್ರಭುದೇವರೊಂದಿಗೆ ಸ್ಟೆಪ್ ಹಾಕಿರುವುದು ಭಾರೀ ವೈರಲ್ ಆಗಿದೆ.

ಹಿರಿಯರಿಗೆ ಗೌರವ ಸೂಚಿಸುವ ಸಮಯ ಮಹಿಳೆಯರ ಸೆರಗು ತಲೆಯ ಮೇಲೇರಿದರೆ, ಪುರುಷರ ಪಂಚೆ ಕೆಳಗಿಳಿಯುವುದು. ದುಬೈ, ಸೌದಿ ಅರೇಬಿಯಾಗಳಲ್ಲಿ ಸಾರ್ವಜನಿಕವಾಗಿ ಲುಂಗಿಯನ್ನು ಎತ್ತಿ ಕಟ್ಟುವುದು ಕಾನೂನುಬಾಹಿರ.

ಅಲ್ಲಿ ಲುಂಗಿ ಎತ್ತಿ ಕಟ್ಟುವುದು ಕಾನೂನು ಬಾಹಿರ, ಇಲ್ಲಿ ಲುಂಗಿ ಕಟ್ಟಿ ಬಂದರೆ ಮಾಲ್‌ನಿಂದ ಬಾಹರ! ಧೋತಿಯ ರೂಪಾಂತರ ಲುಂಗಿ. ಧೋತಿ ಬಿಳಿಬಣ್ಣದ್ದಾದರೆ ಲುಂಗಿ ರಂಗುರಂಗಿನದು. ಪಂಚೆಯ ಮೂಲ ಭಾರತವಾದರೆ, ಲುಂಗಿಯ ಮೂಲ ಬರ್ಮಾ. ಉಷ್ಣ ಹೆಚ್ಚಿರುವ ರಾಷ್ಟ್ರಗಳಲ್ಲಿ ಪ್ಯಾಂಟ್ ಬದಲು ಸ್ವಾಭಾವಿಕ ಏರ್ ಕಂಡೀಷನರ್‌ನಂತಿರುವ ಲುಂಗಿಯನ್ನೇ ಹೆಚ್ಚಾಗಿ ಬಳಸುವರು. ಕೆಲವೆಡೆ ಮಹಿಳೆಯರೂ ಲುಂಗಿಯನ್ನು ಧರಿಸುವುದಿದೆ. ಈ ಫೀಮೇಲ್ ಲುಂಗಿಯೇ ಲಾಚ.

ಆಧುನಿಕ ಉಡುಗೆಗಳ ನಡುವೆ ಔಟ್‌ಡೇಟೆಡ್ ಆಗಿದ್ದ ಲುಂಗಿ ಕಾಲ ಕ್ರಮೇಣ ತನ್ನ ಐಡೆಂಟಿಟಿ ಬದಲಿಸಿಕೊಳ್ಳುತ್ತಿದೆ. ಫ್ಯಾಷನ್ ಪರೇಡುಗಳಲ್ಲಿ ಲುಂಗಿ ರಾರಾಜಿಸುತ್ತಿದೆ. ಹೊಸ ತಲೆಮಾರಿನ ಗಾಯಕ ರಘು ದೀಕ್ಷಿತ್ ಕಲರ್ ಕಲರ್ ಲುಂಗಿಗಳ ಮೇಲೆ ಅಂಗಿ ಧರಿಸಿ ಗಿಟಾರ್ ಹಿಡಿದು ತಾರಕ ಸ್ವರದಲ್ಲಿ ಸೂರು ನೋಡುತ್ತಾ ಹಾಡುತ್ತಿದ್ದರೆ ಅಭಿಮಾನಿಗಳು ಹುಚ್ಚೆದ್ದು ಕುಣಿಯುವರು. ಸೂಪರ್‌ಸ್ಟಾರ್ ರಜನಿಕಾಂತ್ ಪಂಚೆ ಧರಿಸಿ ಕಾಲು ಬೀಸುತ್ತಾ ಶಲ್ಯ ತಿರುಗಿಸುತ್ತಾ ಬರುತ್ತಿದ್ದರೆ ಥಿಯೇಟರಿನಲ್ಲಿ ದುಡ್ಡಿನ ಸುರಿಮಳೆಯಾಗುತ್ತಿತ್ತು. ನಟ ಸಾರ್ವಭೌಮ ರಾಜಕುಮಾರ್ ಅವರು ಪಂಚೆಯನ್ನೇ ಕಚ್ಚೆಯಾಗಿಸಿಕೊಂಡು ದುರುಳರೊಂದಿಗೆ ಹೋರಾಡುವುದನ್ನು ಜನ ಮರೆತಿಲ್ಲ.

'ಕುಲದಲ್ಲಿ ಕೀಳ್ಯಾವುದೋ ಹುಚ್ಚಪ್ಪ ಮತದಲ್ಲಿ ಮೇಲ್ಯಾವುದೋ...' ಎನ್ನುತ್ತಾ ಎಂ.ಪಿ. ಶಂಕರ್ ಹಾಗೂ ತಂಡದವರು ವೀರಗಚ್ಚೆ ಧರಿಸಿ 'ಧೈಯ್ಯಕುತ ಕಿರಧಕ ಧೈಯ್ಯಕುತ ಓ ದಿದ್ದಿರಿ ದಿದ್ದಿರಿ ದಿದ್ದಿರಿ ದಿದ್ದಿರಿ' ಎಂದು ತಾಳಬದ್ಧವಾಗಿ ತಟ್ಟಾಡುವ ವೀರಬಾಹು ನೃತ್ಯವನ್ನು ಇಂದಿಗೂ ಯಾರೂ ಸರಿಗಟ್ಟಲಾಗದು.

ಮಮ್ಮುಟ್ಟಿ, ಮೋಹನ್ ಲಾಲ್‌ರಂತಹ ಶ್ರೇಷ್ಠ ನಟರ ಸೊಂಟ ಬಳಸಿ ಪ್ರಶಸ್ತಿ ಪ್ರದಾನ ಸಮಾರಂಭಗಳ ವೇದಿಕೆಯನ್ನು ಏರುವ ಭಾಗ್ಯ ಪಂಚೆಯದು. ಅಂತೆಯೇ ನಮ್ಮ ಮಾಜಿ ಪ್ರಧಾನಿ, ಹಾಲಿ ಮುಖ್ಯಮಂತ್ರಿಗಳೊಂದಿಗೆ ಸದನಕ್ಕೂ ಎಂಟ್ರಿ ಕೊಡುವ ಪಂಚೆ ಅಲ್ಲಿ ಹಲವು ವಿಶಿಷ್ಟ ಪಂಚ್‌ಗಳಿಗೂ ಸಾಕ್ಷಿಯಾಗುವುದು. ಅಯ್ಯಪ್ಪ ಸ್ವಾಮಿಯ ಭಕ್ತರೊಂದಿಗೆ ಕಪ್ಪು, ನೀಲಿ, ಕೇಸರಿಯ ಪಂಚೆಗಳು ಶಬರಿಮಲೆ ಯಾತ್ರೆಗೂ ತೆರಳುವವು. ಹರಿಸೇವೆ ಸಮಯ ಸರದಿಯಲ್ಲಿ ನಿಂತು ಪಾದಕ್ಕೆರಗುವ ಭಕ್ತರು ನೀಡುವ ಕಾಣಿಕೆಗಳು ಪುರೋಹಿತರ ಪಂಚೆಯ ಮೇಲಿನ ಮಡಿಕೆಯಲ್ಲಿ ರೋಲ್ ಆಗುತ್ತಾ ಮಡಿ ಪಂಚೆ ಇಂಚಿಂಚೇ ಮೇಲೇರಿ 'ಮಿಡಿ' ಪಂಚೆಯಾಗುವುದು. ಹೀಗೆ ಸಾಮಾಜಿಕ, ಸಾಂಸ್ಕೃತಿಕ, ಧಾರ್ಮಿಕ ರಾಯಭಾರಿಯಾಗಿ ಪಂಚೆಯ ಪಾತ್ರ ಹಿರಿದು.

'ಡೋಂಟ್ ಜಡ್ಜ್ ಎ ಬುಕ್ ಬೈ ಇಟ್ಸ್ ಕವರ್' ಎಂಬಂತೆ ಪಂಚೆ ಧರಿಸಿ ಕಾರು ಖರೀದಿಸಲು ಬರುವ ಅಂಬರೀಶ್, ವಿಷ್ಣು ಜೋಡಿ ಶಲ್ಯ ತಿರುಗಿಸುತ್ತಾ ಕಾರಿನ ಮೌಲ್ಯ ಕೇಳಲು, ಡೀಲರ್ ಅವರನ್ನು ಆಪಾದಮಸ್ತಕ ನೋಡಿ ಅವಹೇಳನಗೈಯ್ಯುವನು. 'ದಿಗ್ಗಜರು' ತಾವು ಮೂಟೆಯಲ್ಲಿ ಹೊತ್ತು ತಂದಿದ್ದ ಹತ್ತು ಲಕ್ಷ ಹಣವನ್ನು ನೆಲಕ್ಕೆ ತರಕಾರಿ ಸುರಿದಂತೆ ಸುರಿಯಲು ವ್ಯಾಪಾರಿಯ ಪಂಚೇಂದ್ರಿಯಗಳು ಅಲರ್ಟ್ ಆಗಿ ಅದೇ ಪಂಚೆಧಾರಿಗಳಿಗೆ ರಾಜಮರ್ಯಾದೆ ದೊರಕುವುದು. ಹೀಗೆ ಪಂಚೆಯ **punch** ಅವತಾರಗಳು ಅನನ್ಯ. ಸಾಂಪ್ರದಾಯಿಕ ದಿರಿಸುಗಳ ಪಟ್ಟಿಯಲ್ಲಿ ಅದು ಎಂದಿಗೂ ಅಗ್ರಗಣ್ಯ.

ಪ್ರತಿಕ್ರಿಯಿಸಿ: **feedback@sudha.co.in**